

# ರೇಷಿಮೆ ದಾಟಿತು ಸೀರೆಯ ಸೀಮೆ

**ರೇಷ್ಮೆಯಿಂದ ಬರೀ ಸೀರೆಯಷ್ಟೇ ಅಲ್ಲದೆ ಸೌಂದರ್ಯವರ್ಧಕಗಳನ್ನೂ ತಯಾರಿಸಬಹುದು. ಇದು ನೈಸರ್ಗಿಕವಾಗಿದ್ದು, ಮೇಕಪ್‌ಗಾಗಿ ಬಳಸಬಹುದು.**

■ ರಾಧಾಲಕ್ಷ್ಮಿ ವೈ.ಸಿ.
■ ಮುಕುಂದ್ ಕಿರಸೂರ್

ಸುಂದರವಾಗಿ ಕಾಣಿಸಬೇಕು ಎಂಬುದು ಯಾರಿಗೆ ತಾನೆ ಇಷ್ಟವಿಲ್ಲ? ಮುಖ ಅಂದವಾಗಿರಬೇಕು, ಎಲ್ಲರ ಎದುರು ಎದ್ದು ಕಾಣಬೇಕು ಎಂಬ ಹಂಬಲ ಎಲ್ಲರಿಗೂ ಇರುತ್ತದೆ. ಇದಕ್ಕಾಗಿ ಸೌಂದರ್ಯವರ್ಧಕಗಳ ಮೊರೆ ಹೋಗಬೇಕಾಗುತ್ತದೆ. ರಾಸಾಯನಿಕಯುಕ್ತ ಕಾಸ್ಮೆಟಿಕ್ಸ್ ಬದಲಾಗಿ ನೈಸರ್ಗಿಕ ಹಾಗೂ ಯಾವುದೇ ಅಡ್ಡಪರಿಣಾಮ ಬೀರದ ಸೌಂದರ್ಯವರ್ಧಕಗಳ ಬಳಕೆ ಒಳ್ಳೆಯದು.

ಸೌಂದರ್ಯವರ್ಧಕ ಅಥವಾ ಕಾಸ್ಮೆಟಿಕ್ಸ್ ಎಂಬ ಪದದ ಮೂಲ ಗ್ರೀಕ್‌ನ ಕೊಸ್ಮೆಟಿಕೆ ತೆಖ್ನೆ (**kosmetike tekhne**). ಇದರರ್ಥ ಉಡುಗೆ ಮತ್ತು ಆಭರಣಗಳ ತಂತ್ರ. ಸೌಂದರ್ಯವರ್ಧಕಗಳನ್ನು ಸಾಮಾನ್ಯವಾಗಿ ನೈಸರ್ಗಿಕ ಅಥವಾ ರಾಸಾಯನಿಕ ಸಂಯುಕ್ತಗಳಿಂದ ತಯಾರಿಸಲಾಗುತ್ತದೆ. ಸೌಂದರ್ಯದ ಜೊತೆ ಇವು ನಮ್ಮ ಮಾನಸಿಕ ಸ್ಥಿತಿಯನ್ನೂ ಉತ್ತಮಗೊಳಿಸಿ, ಆತ್ಮವಿಶ್ವಾಸವನ್ನು ಹೆಚ್ಚಿಸಲು ಸಹಾಯ ಮಾಡುತ್ತವೆ. ಅಷ್ಟೇ ಅಲ್ಲ, ಇವು ಸಾಮಾಜಿಕ ಅಭಿವ್ಯಕ್ತಿಯ ಪ್ರಮುಖ ಸಾಧನಗಳೂ ಹೌದು.

ಪ್ರಾಚೀನ ಕಾಲದಿಂದ ಸೌಂದರ್ಯವರ್ಧಕ ಮತ್ತು ಸೌಂದರ್ಯ ಸಾಧನಗಳು ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯ ಪ್ರಮುಖ ಭಾಗವಾಗಿವೆ. ಇವುಗಳ ಉಪಯೋಗ ಪ್ರಾಚೀನ ಭಾರತದಲ್ಲಿ ಪ್ರಸ್ತುತ ಸಮಯಕ್ಕಿಂತ ಅತಿ ಹೆಚ್ಚಿನ ಪ್ರಮಾಣದಲ್ಲಿತ್ತು ಎಂದರೆ ತಪ್ಪಿಲ್ಲ. ಶ್ರೀಗಂಧ, ಕರ್ಪೂರ, ಕೇಸರಿ, ಕಸ್ತೂರಿ ಮುಂತಾದ ಅನೇಕ ನೈಸರ್ಗಿಕ ಸೌಂದರ್ಯವರ್ಧಕಗಳು ಮತ್ತು ಸುಗಂಧ ದ್ರವ್ಯಗಳನ್ನು ಹಿಂದಿನ ದಿನಗಳಲ್ಲಿ ಹೇರಳವಾಗಿ ಬಳಸಲಾಗುತ್ತಿತ್ತು. ಆರೋಗ್ಯಕ್ಕೆ ಅಪಾಯಕಾರಿಯಾದ ಕೃತಕ ಸೌಂದರ್ಯವರ್ಧಕಗಳನ್ನು ಬಳಸುವ ಬದಲು ಈ ಪ್ರಾಚೀನ, ಸಾಂಪ್ರದಾಯಿಕ, ಸುರಕ್ಷಿತ, ನೈಸರ್ಗಿಕ ಸೌಂದರ್ಯವರ್ಧಕಗಳನ್ನು ಸೌಂದರ್ಯ ಮತ್ತು ಆರೋಗ್ಯವನ್ನು ಹೆಚ್ಚಿಸಲು ಈಗಲೂ ಹೆಚ್ಚು ಹೆಚ್ಚಾಗಿ ಬಳಸಬಹುದು. ನಮ್ಮ ಅನೇಕ ದೇವಾಲಯಗಳಲ್ಲಿನ ಶಿಲ್ಪಗಳು, ಪ್ರಾಚೀನ ಗ್ರಂಥಗಳು ಮತ್ತು ಅಜಂತಾ ಗುಹೆಗಳಲ್ಲಿನ ವರ್ಣಚಿತ್ರಗಳು ಆ ದಿನಗಳಲ್ಲಿನ ಸೌಂದರ್ಯವರ್ಧಕಗಳ ಬಳಕೆಯನ್ನು ನಿಖರವಾಗಿ ಬಿಂಬಿಸುತ್ತವೆ.

ವಸ್ತ್ರಗಳ ರಾಣಿ ಎನಿಸಿರುವ ರೇಷ್ಮೆ ವಿಶ್ವದ ಅತ್ಯಂತ ಬೇಡಿಕೆಯ, ಸೊಗಸಾದ ವೈಭವೋಪೇತ ವಸ್ತ್ರ. ಇದು ಈಗ ಕೇವಲ ವಸ್ತ್ರಕ್ಕಾಗಿ ಮಾತ್ರ ಮೀಸಲಾಗಿರದೆ ವಸ್ತ್ರೇತರ ಉಪಯೋಗವನ್ನೂ ಹೊಂದಿದೆ. ಔಷಧೀಯ, ಪೌಷ್ಟಿಕಾಂಶ ಸಂಬಂಧಿತ, ಜೈವಿಕಔಷಧ,